**<u>ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.</u>**

# ಸಿ.ಸಿ. ನಂ. 413/2025

ಫಿರ್ಯಾದುದಾರರು ಗ್ರಾಮಾಂತರ ಪೊಲೀಸ್ ಠಾಣೆ, ಸಾಗರ.

ವಿರುದ್ಧ

ಆರೋಪಿತರು:- ಸವಿತಾ.

| | |
|---|---|
| 1 ನೇ ಆರೋಪಿತನ ಹೆಸರು | - ಸವಿತಾ. |
| ಗಂಡನ ಹೆಸರು | - ಪರಶುರಾಮ. |
| ವಯಸ್ಸು: | - 37 ವರ್ಷ, |
| ಉದ್ಯೋಗ | - ವ್ಯವಸಾಯ. |
| ವಾಸ: | - ಹೊಸಕೊಪ್ಪ ಮಜರೆ, ಆತವಾಡಿ ಗ್ರಾಮ, ಸಾಗರ ತಾಲ್ಲೂಕು, ಶಿವಮೊಗ್ಗ. |

## <u>ದೋಷಾರೋಪಣೆ</u>

ಸಾಗರದ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರಾದ ಚಾಂದಿನಿ ಜಿ.ಯು., ಬಿ.ಎ.ಎಲ್ಎಲ್.ಬಿ., ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆ ಹೊರಿಸುತ್ತೇನೆ.

ಸಾಕ್ಷಿ-1 ರವರು ಹೆಗ್ಗೋಡು ಗ್ರಾಮ ಪಂಚಾಯ್ತಿಯಲ್ಲಿ ಪಿಡಿಓ ಆಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದು, ಆರೋಪಿತಳಾದ ನೀವು ಸಾಕ್ಷಿ-1 ರವರ ವ್ಯಾಪ್ತಿಯಲ್ಲಿನ ಆತವಾಡಿ ಹೊಸಕೊಪ್ಪ ಸರ್ವೆ ಸಂಖ್ಯೆ 72 ರಲ್ಲಿನ ಮನೆ ತಮ್ಮದು ಎಂದು ಮನೆಗೆ ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು ನಿರಕ್ಷೇಪಣಾ ಪತ್ರವನ್ನು ಸಾಕ್ಷಿ-1 ರವರನ್ನು ಕೇಳಿದ್ದು, ಸಾಕ್ಷಿ-1 ರವರು ದಾಖಲಾತಿ ಸಮರ್ಪಕವಾಗಿಲ್ಲವೆಂದು ಎನ್.ಓ.ಸಿ. ನೀಡದೇ ಇದ್ದರಿಂದ ನೀವು 2022 ನೇ ಜೂನ್ ತಿಂಗಳ ಯಾವುದೋ ಒಂದು ದಿನ ಬೆಳಗ್ಗೆ 11.30 ಗಂಟೆ ಸಮಯದಲ್ಲಿ ಸಾಕ್ಷಿ-1 ರವರ ಕೊಠಡಿಗೆ ಹೋಗಿ ಸಾಕ್ಷಿ-1 ರವರ ಲೆಟರ್ ಹೆಡ್ ಮತ್ತು ಶೀಲನ್ನು ಕಳ್ಳತನದ ಮೂಲಕ ತೆಗೆದುಕೊಂಡು ಹೋಗಿ, ಆ ಮೂಲಕ ನೀವು ಭಾರತೀಯ ದಂಡ

ಸಂಹಿತೆ ಕಲಂ *379* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಎರಡನೆಯದಾಗಿ, **2022** ನೇ ಅಕ್ಟೋಬರ್ **2** ನೇ ತಾರೀಖಿನಂದು ನೀವು ಶಿವಮೊಗ್ಗದ ಯಾವುದೋ ಕಂಪ್ಯೂಟರ್ ಸೆಂಟರ್ ನಲ್ಲಿ ನೀವೇ ಸಾಕ್ಷಿ-**1** ರವರು ಎಂಬಂತೆ ನಕಲು ಮಾಡುವ ಉದ್ದೇಶದಿಂದ ಲೆಟರ್ ಹೆಡ್ ನಲ್ಲಿ ವಿದ್ಯುತ್ ಇಲಾಖೆಗೆ ನೀಡಲು ಬೇಕಾದ ರೀತಿಯಲ್ಲಿ ನಿರಕ್ಷೇಪಣಾ ಪತ್ರವನ್ನು ಟೈಪ್ ಮಾಡಿಸಿಕೊಂಡು ಯಾವುದೇ ಹೆಂಗಸಿನ ಮೂಲಕ ಸಾಕ್ಷಿ-**1** ರವರ ಸಹಿಯನ್ನು ನೀವು ನಕಲು ಮಾಡಿಸಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ *465, 472* ಮತ್ತು *473* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತಳಾದ ನೀವು, ಅಪ್ರಮಾಣಿಕವಾಗಿ ವಂಚಿಸುವ ದೃಷ್ಟಿಯಿಂದ ಮತ್ತು ನಿಮ್ಮ ವಿರುದ್ಧ ಯಾವುದೇ ಸಾಕ್ಷಿ ಸಿಗದಂತೆ ಸಾಕ್ಷಿ-***14*** ರವರ ಮೂಲಕ ಮೆಸ್ಕಾಂ ಇಲಾಖೆಗೆ ದಾಖಲಾತಿಗಳನ್ನು ನೀಡಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ *201* ಮತ್ತು *420* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಆದ್ದರಿಂದ ನಿಮ್ಮ ಮೇಲೆ ಮುಂದಿನ ಕೇಸು ನಡೆಸುವಂತೆ ನಿರ್ದೇಶಿಸಿದೆ.

ದಿನಾಂಕಃ 29.07.2025.

**(ಚಾಂದಿನಿ ಜಿ.ಯು.)**
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

# ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.

ಸಿ.ಸಿ. ನಂ. 413/2025

## ಆರೋಪಿಯ ಹೇಳಿಕೆ

1 ನೇ ಆರೋಪಿಯ ಹೆಸರುಃ ಸವಿತಾ ಕೋಂ ಪರಶುರಾಮ.

ಪ್ರ.1- ನಿಮಗೆ ಈ ಕೇಸಿನಲ್ಲಿ ಮಾಡಿರುವ ಆರೋಪಣೆಯನ್ನು ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಲಾಗಿದ್ದು, ಮನವರಿಕೆಯಾಯಿತೇ?

ಉತ್ತರಃ-

ಪ್ರ.2- ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ-

(ದಿಃ 29.07.2025 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

(ಚಾಂದಿನಿ ಜಿ.ಯು.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.